Adda247 GET IT ON Google Play

**Signature and Name of Invigilator**

1. (Signature) ____________________

   (Name) ____________________

2. (Signature) ____________________

   (Name) ____________________

**Answer Sheet No. :** ..............................................

(To be filled by the Candidate)

**Roll No.** | | | | | | | |

(In figures as per admission card)

**Roll No.** ____________________

(In words)

**Test Booklet No.**

**J—2107**

**PAPER—II**

# KANNADA

**Time : 1¼ hours]** **[Maximum Marks : 100**

Number of Pages in this Booklet : **16** Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the question booklet will be replaced nor any extra time will be given.**
   (iii) After this verification is over, the Serial No. of the booklet should be entered in the Answer-sheets and the Serial No. of Answer Sheet should be entered on this Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.

   **Example :** (A) (B) ● (D)

   where (C) is the correct response.
5. Your responses to the items are to be indicated in the Answer Sheet given **inside the Paper I booklet only**. If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your name or put any mark on any part of the test booklet, except for the space allotted for the relevant entries, which may disclose your identity, you will render yourself liable to disqualification.
9. You have to return the test question booklet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is NO negative marking.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए।
2. इस प्रश्न-पत्र में पचास बहुविकल्पीय प्रश्न हैं।
3. परीक्षा प्रारम्भ होने पर, प्रश्न-पुस्तिका आपको दे दी जायेगी। पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें। खुली हुई या बिना स्टीकर-सील की पुस्तिका स्वीकार न करें।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं। दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें। इसके लिए आपको पाँच मिनट दिये जायेंगे। उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा।**
   (iii) इस जाँच के बाद प्रश्न-पुस्तिका की क्रम संख्या उत्तर-पत्रक पर अंकित करें और उत्तर-पत्रक की क्रम संख्या इस प्रश्न-पुस्तिका पर अंकित कर दें।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं। आपको सही उत्तर के दीर्घवृत्त को पेन से भरकर काला करना है जैसा कि नीचे दिखाया गया है।

   **उदाहरण :** (A) (B) ● (D)

   जबकि (C) सही उत्तर है।
5. प्रश्नों के उत्तर **केवल प्रश्न पत्र I के अन्दर दिये गये** उत्तर-पत्रक पर ही अंकित करने हैं। यदि आप उत्तर पत्रक पर दिये गये दीर्घवृत्त के अलावा किसी अन्य स्थान पर उत्तर चिन्हांकित करते है, तो उसका मूल्यांकन नहीं होगा।
6. अन्दर दिये गये निर्देशों को ध्यानपूर्वक पढ़ें।
7. कच्चा काम (Rough Work) इस पुस्तिका के अन्तिम पृष्ठ पर करें।
8. यदि आप उत्तर-पुस्तिका पर अपना नाम या ऐसा कोई भी निशान जिससे आपकी पहचान हो सके, किसी भी भाग पर दर्शाते या अंकित करते हैं तो परीक्षा के लिये अयोग्य घोषित कर दिये जायेंगे।
9. आपको परीक्षा समाप्त होने पर उत्तर-पुस्तिका निरीक्षक महोदय को लौटाना आवश्यक है और परीक्षा समाप्ति के बाद अपने साथ परीक्षा भवन से बाहर न लेकर जायें।
10. **केवल नीले/काले बाल प्वाईंट पैन का ही इस्तेमाल करें।**
11. **किसी भी प्रकार का संगणक ( कैलकुलेटर ) या लाग टेबल आदि का प्रयोग वर्जित है।**
12. **गलत उत्तर के लिए अंक नहीं काटे जायेंगे।**


Test Prime
ALL EXAMS, ONE SUBSCRIPTION
70,000+ Mock Tests
Personalised Report Card
Unlimited Re-Attempt
600+ Exam Covered
Previous Year Papers
500% Refund
IBPS
NABARD
ATTEMPT FREE MOCK NOW

Adda247 GET IT ON Google Play

# KANNADA

## ಕನ್ನಡ

## PAPER – II

## ಪತ್ರಿಕೆ – II

**Note :** This paper contains **fifty** (50) multiple choice questions, each question carrying **two** (2) marks. Attempt **all** of them.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು** (50) ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು** (2) ಅಂಕಗಳು ಇರುತ್ತವೆ. **ಎಲ್ಲಾ** ಪ್ರಶ್ನೆಗಳನ್ನು ಉತ್ತರಿಸಿ.

***ಏಕ ಆಯ್ಕೆ ಮಾದರಿಯ ಪ್ರಶ್ನೆಗಳು.***

1. ಗೊಮ್ಮಟ ಸ್ತುತಿ ಇರುವ ಶಾಸನವನ್ನು ಬರೆದ ಕವಿ :

   (A) ಬೊಪ್ಪಣ (B) ಜಿನವಲ್ಲಭ

   (C) ಬುಕ್ಕ (D) ಜನ್ನ

2. ಇದೊಂದು ಗದ್ಯ ಪ್ರಕಾರದ ಕೃತಿ :

   (A) ಕವಿರಾಜಮಾರ್ಗ (B) ಜಗನ್ನಾಥವಿಜಯ

   (C) ಶಬರಶಂಕರ ವಿಳಾಸ (D) ಚಾವುಂಡರಾಯ ಪುರಾಣ

3. 'ನೀರೊಳಗಿರ್ದುಂಬೆಮರ್ತನುರಗಪತಾಕಂ' ಎಂಬ ವಾಕ್ಯವನ್ನು ಪ್ರಯೋಗಿಸಿರುವ ಕವಿ :

   (A) ಪಂಪ (B) ರನ್ನ

   (C) ಪೊನ್ನ (D) ನಾಗಚಂದ್ರ

4. ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಕನ್ನಡ ಕವಿ :

   (A) ತಿಮ್ಮಪ್ಪ (B) ತಿರುಮಲಾರ್ಯ

   (C) ತಿಮ್ಮಣ್ಣ (D) ಪುರಂದರದಾಸರು

Adda247 GET IT ON Google Play

5. ತಿರುನೀಲಕಂಠನ ಕಥೆಯನ್ನು ಬರೆದಿರುವ ಕವಿ :

(A) ನಾಗವರ್ಮ (B) ನಂಜುಂಡ

(C) ಹರಿಹರ (D) ಸಂಚಿ ಹೊನ್ನಮ್ಮ

6. ಮಹಿಪತಿದಾಸರ ಸ್ಥಳ :

(A) ಪುಲಿಗೆರೆ (B) ಮಾನಿವ

(C) ಹಂಪೆ (D) ಕಾಖಂಡಕಿ

7. ವಿಮಲಸೂರಿಯ ಪ್ರಭಾವಕ್ಕೆ ಒಳಗಾದ ಕವಿ :

(A) ಕೇಶಿರಾಜ (B) ನಾಗಚಂದ್ರ

(C) ನಾಗವರ್ಮ (D) ನಾಗರಾಜ

8. ನಾಟಕ ಸಾಹಿತ್ಯ ಪ್ರಕಾರಕ್ಕೆ ಸೇರಿದ ಕೃತಿ :

(A) ಮಿತ್ರವಿಂದಾಗೋವಿಂದ (B) ರಾಮಧಾನ್ಯ ಚರಿತೆ

(C) ಅದ್ಭುತರಾಮಾಯಣ (D) ಚಾಮರಾಜೋಕ್ತಿ ವಿಲಾಸ

9. ಕೈವಲ್ಯ ಪದ್ಧತಿ ಕೃತಿಯನ್ನು ಬರೆದ ಕವಿ :

(A) ಮುಪ್ಪಿನ ಷಡಕ್ಷರಿ (B) ಮಲ್ಲಣಾರ್ಯ

(C) ಲಕ್ಕಣ್ಣ ದಂಡೇಶ (D) ನಿಜಗುಣ ಶಿವಯೋಗಿ

10. ಶಾಸನ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ ಪಾಶ್ಚಾತ್ಯ ವಿದ್ವಾಂಸ :

(A) ಮೊಗ್ಲಿಂಗ್ (B) ಬಿ. ಎಲ್. ರೈಸ್

(C) ಕಾಲ್ಡ್‌ವೆಲ್ (D) ಕಿಟ್ಟೆಲ್

Adda247
GET IT ON Google Play

**11.** ಇವನೊಬ್ಬ ವಯ್ಯಾಕರಣ :

(A) ಮೊದಲನೆಯ ನಾಗವರ್ಮ
(B) ಕೇಶಿರಾಜ
(C) ಮುದ್ದಣ
(D) ಕೆಂಪು ನಾರಾಯಣ

**12.** ಅನುನಾಸಿಕ ವರ್ಣಕ್ಕೆ ಒಂದು ಉದಾಹರಣೆ :

(A) ಕ
(B) ಬ
(C) ಪ
(D) ನ

**13.** 'ಕಾವ್ಯಸ್ಯಾತ್ಮಾ ಧ್ವನಿಃ' - ಎಂದು ಘೋಷಿಸಿದವರು :

(A) ಆನಂದವರ್ಧನ
(B) ಭಾಮಹ
(C) ವಾಮನ
(D) ವಿಶ್ವನಾಥ

**14.** 'ಮಹೋನ್ನತಿ ತತ್ವವನ್ನು ಪ್ರತಿಪಾದಿಸಿದ ಲೇಖಕರು :

(A) ಕಾಮು
(B) ಲಾಂಜೈನಸ್
(C) ಕ್ರೋಚೆ
(D) ಟಿ. ಎಸ್. ಇಲಿಯಟ್

**15.** 'ವಿಭಾವಾನುಭಾವ ಸಂಚಾರೀ ಸಂಯೋಗಾದ್ರಸನಿಷ್ಪತ್ತಿಃ' ಎಂಬ ಸೂತ್ರವನ್ನು ನಿರೂಪಿಸಿದವರು :

(A) ಶ್ರೀವಿಜಯ
(B) ಮಮ್ಮಟ
(C) ಭರತಮುನಿ
(D) ಕ್ಷೇಮೇಂದ್ರ

**16.** 'ನುಡಿದರೆ ಮುತ್ತಿನ ಹಾರದಂತಿರಬೇಕು' ಇಲ್ಲಿರುವ ಅಲಂಕಾರ :

(A) ರೂಪಕಾಲಂಕಾರ
(B) ಉಪಮಾಲಂಕಾರ
(C) ಸ್ವಭಾವಾಲಂಕಾರ
(D) ಅರ್ಥಾಂತರನ್ಯಾಸಾಲಂಕಾರ

**17.** ಇದೊಂದು ಅನುವಾದಿತ ಕಾದಂಬರಿ :

(A) ವಿಷವೃಕ್ಷ
(B) ಮಾಡಿದ್ದುಣ್ಣೊ ಮಹಾರಾಯ
(C) ಮರಳಿ ಮಣ್ಣಿಗೆ
(D) ಗ್ರಾಮಾಯಣ

Adda247 GET IT ON Google Play

18. ಭಾಸನ ಸಮಸ್ತ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿದವರು :

(A) ಡಾ|| ಕೆ. ಕೃಷ್ಣಮೂರ್ತಿ (B) ಎಸ್. ವಿ. ರಂಗಣ್ಣ

(C) ಸಿದ್ಧಯ್ಯ ಪುರಾಣಿಕ (D) ಎಸ್. ವಿ. ಪರಮೇಶ್ವರ ಭಟ್ಟ

19. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ :

(A) ದ.ರಾ. ಬೇಂದ್ರೆ ಯವರ 'ನಾಕುತಂತಿ'.

(B) ಕೆ. ಎಸ್. ನರಸಿಂಹ ಸ್ವಾಮಿಯವರ 'ಮೈಸೂರು ಮಲ್ಲಿಗೆ'.

(C) ಡಾ|| ರಂ. ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'.

(D) ಡಾ|| ಎಚ್. ತಿಪ್ಪೇರುದ್ರಸ್ವಾಮಿ ಅವರ 'ತೌಲನಿಕ ಕಾವ್ಯಮೀಮಾಂಸೆ'.

20. 'ಸತ್ತವರ ನೆರಳು' ನಾಟಕದ ಕರ್ತೃ :

(A) ಶ್ರೀರಂಗ (B) ಕೈಲಾಸಂ

(C) ಜೆ. ಬಿ. ಜೋಷಿ (D) ಗಿರೀಶ ಕಾರ್ನಾಡ

***ಬಹು ಆಯ್ಕೆ ಮಾದರಿಯ ಪ್ರಶ್ನೆಗಳು.***

21. ರಾಮಾಯಣದ ಕಥಾ ವಸ್ತುವನ್ನಿಟ್ಟುಕೊಂಡು ಕೃತಿ ರಚಿಸಿದವರು :

(i) ನರಹರಿ ಮತ್ತು ನಾಗಚಂದ್ರ

(ii) ಮುದ್ದಣ ಮತ್ತು ಕುಮುದೇಂದು

(iii) ನೇಮಿಚಂದ್ರ ಮತ್ತು ಜನ್ನ

(iv) ಪೊನ್ನ ಮತ್ತು ಆಂಡಯ್ಯ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii) (B) (i) ಮತ್ತು (iii)

(C) (ii) ಮತ್ತು (iv) (D) (iii) ಮತ್ತು (iv)

Adda247 GET IT ON Google Play

**22.** ಹಳಗನ್ನಡ ಭಾಷಾರೂಪದಲ್ಲಿ ಕೃತಿ ರಚನೆ ಮಾಡಿದವರು :

(i) ರಾಘವಾಂಕ ಮತ್ತು ಕುಮಾರವ್ಯಾಸ

(ii) ಹರಿಹರ ಮತ್ತು ಲಕ್ಷ್ಮೀಶ

(iii) ನಯಸೇನ ಮತ್ತು ಚಾವುಂಡರಾಯ

(iv) ಷಡಕ್ಷರಿ ಮತ್ತು ರುದ್ರಭಟ್ಟ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii) (B) (ii) ಮತ್ತು (iv)

(C) (i) ಮತ್ತು (iv) (D) (iii) ಮತ್ತು (iv)

**23.** ರೊಮ್ಯಾಂಟಿಕ್ ಪ್ರಕಾರದ ಕಾವ್ಯ ಸಂಕಲನ :

(i) ಭುಮಿಗೀತ ಮತ್ತು ಹೊಕ್ಕುಳಲ್ಲಿ ಹೊನಿಲ್ಲ

(ii) ಪಕ್ಷಿಕಾಶಿ ಮತ್ತು ಗರಿ

(iii) ದ್ರಾಕ್ಷಿ ದಾಳಿಂಬೆ ಮತ್ತು ನಲ್ಮೆ

(iv) ಸಾವಿರಾರು ನದಿಗಳು ಮತ್ತು ರಂಗಬಿನ್ನಪ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii) (B) (ii) ಮತ್ತು (iii)

(C) (ii) ಮತ್ತು (iv) (D) (i) ಮತ್ತು (iv)

**24.** ಇವು ಭಾರತೀಯ ಕಾವ್ಯಮೀಮಾಂಸೆಯ ಪರಿಕಲ್ಪನೆಗಳು :

(i) ಅಲಂಕಾರ ಮತ್ತು ರಸ

(ii) ಗುಣ ಮತ್ತು ಭವ್ಯತೆ

(iii) ವಕ್ರೋಕ್ತಿ ಮತ್ತು ಕೆಥಾರ್ಸಿಸ್

(iv) ರೀತಿ ಮತ್ತು ಔಚಿತ್ಯ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii) (B) (i) ಮತ್ತು (iv)

(C) (ii) ಮತ್ತು (iii) (D) (iii) ಮತ್ತು (iv)

Adda247 GET IT ON Google Play

25. ಇವು ಅನ್ಯ ದೇಶೀಯ ಪದಗಳು :

(i) ತಂಬಾಕು ಮತ್ತು ಎಲೆ

(ii) ತರಕಾರಿ ಮತ್ತು ಪಪ್ಪಾಯಿ

(iii) ದಸ್ತಾವೇಜು ಮತ್ತು ಕಛೇರಿ

(iv) ಸಾಬೂನು ಮತ್ತು ಉಪ್ಪು

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii)
(B) (ii) ಮತ್ತು (iv)
(C) (ii) ಮತ್ತು (iii)
(D) (iii) ಮತ್ತು (iv)

26. ನಾಟಕವನ್ನೇ ತಮ್ಮ ಬರವಣಿಗೆಯ ಪ್ರಧಾನ ಮಾಧ್ಯಮವನ್ನಾಗಿ ಸ್ವೀಕರಿಸಿದವರು :

(i) ಕೈಲಾಸಂ ಮತ್ತು ಸಂಸ

(ii) ರಾಜರತ್ನಂ ಮತ್ತು ಬಿ. ಪುಟ್ಟಸ್ವಾಮಯ್ಯ

(iii) ಸಿಂಪಿಲಿಂಗಣ್ಣ ಮತ್ತು ತರಾಸು

(iv) ಗಿರೀಶ್ ಕಾರ್ನಾಡ್ ಮತ್ತು ಪರ್ವತವಾಣಿ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii)
(B) (ii) ಮತ್ತು (iv)
(C) (iii) ಮತ್ತು (iv)
(D) (i) ಮತ್ತು (iv)

27. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತವೆ ?

(i) ಮಾರ್ಕ್ಸ್‌ವಾದಿ ವಿಮರ್ಶೆ - ರೇಮಂಡ್ ವಿಲಿಯಮ್ಸ್

(ii) ರೊಮ್ಯಾಂಟಿಕ್ ವಿಮರ್ಶೆ - ಕೋಲ್‌ರಿಜ್

(iii) ಸ್ತ್ರೀವಾದಿ ವಿಮರ್ಶೆ - ಐ. ಎ. ರಿಚರ್ಡ್ಸ್

(iv) ರಾಚನಿಕ ವಿಮರ್ಶೆ - ಟಿ. ಎಸ್. ಇಲಿಯಟ್

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii)
(B) (i) ಮತ್ತು (iii)
(C) (ii) ಮತ್ತು (iii)
(D) (iii) ಮತ್ತು (iv)

Adda247 GET IT ON Google Play

**28.** ಇವು ಆದೇಶ ಸಂಧಿಗೆ ಉದಾಹರಣೆಗಳಾಗಿವೆ :

(i) ವಿದ್ಯಾರ್ಥಿ ಮತ್ತು ಸೂರ್ಯೋದಯ

(ii) ಸವಿಯೂಟ ಮತ್ತು ಮಾತಿಲ್ಲ

(iii) ಮಳೆಗಾಲ ಮತ್ತು ನೀರ್ಗುದುರೆ

(iv) ಇಂಚರ ಮತ್ತು ತಂಬೆಲರು

ಇವುಗಳಲ್ಲಿ ಸರಿಯಾದ ಉತ್ತರ :

(A) (iii) ಮತ್ತು (iv) (B) (i) ಮತ್ತು (iii)

(C) (ii) ಮತ್ತು (iv) (D) (i) ಮತ್ತು (iv)

**29.** ಇವು ಅರ್ಥವಿಕಾಸಕ್ಕೆ ಉದಾಹರಣೆಗಳು :

(i) ಎಣ್ಣೆ

(ii) ಬೃಹಸ್ಪತಿ

(iii) ಸೀರೆ

(iv) ಲೋಹ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii) (B) (ii) ಮತ್ತು (iv)

(C) (i) ಮತ್ತು (iv) (D) (iii) ಮತ್ತು (iv)

**30.** ಇವು ತದ್ಭವಕ್ಕೆ ಉದಾಹರಣೆಗಳು :

(i) ಷುಕ್ಕಿ

(ii) ಕಜ್ಜ

(iii) ಯಜ್ಞ

(iv) ಕಮಲ

ಇವುಗಳಲ್ಲಿ ಸರಿಯಾದ ಉತ್ತರ :

(A) (ii) ಮತ್ತು (iii) (B) (i) ಮತ್ತು (ii)

(C) (iii) ಮತ್ತು (iv) (D) (ii) ಮತ್ತು (iv)

Adda247 GET IT ON Google Play

***ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ***

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿ. ಸರಿಯಾದ ಉತ್ತರದ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.

ಸೌಂದರ್ಯನಿರ್ಮಿತಿ ಮತ್ತು ಸಮೀಕ್ಷೆಗಳು ಒಂದನ್ನೊಂದು ಬೆಂಬತ್ತಿ ಎಂದಿನಿಂದಲೂ ಸಾಗಿಬಂದಿವೆ. ನಿರ್ಮಿತಿಗೆ ಸಮೀಕ್ಷೆ ಆಸ್ವಾದರೂಪವಾಗಿದೆ. ವಿವರಣ ರೂಪವಾಗಿದೆ. ವಿಶಿಷ್ಟಕೃತಿಗಳ ಸಮೀಕ್ಷೆಯಿಂದ ಸಾಮಾನ್ಯ ತತ್ವಗಳೂ ನಿಯಮಗಳೂ ನಿಷ್ಪನ್ನವಾಗಿವೆ. ಇದೆಲ್ಲದರ ಪರಿಣಾಮವಾಗಿ ಹೊಸ ನಿರ್ಮಿತಿಗೆ ಆಯಾ ಕಾಲದೇಶದ ಆವರಣದಲ್ಲಿ ಹೊಸ ಸ್ಫುರಣ ದೊರೆತಿದೆ. ಹೊಸ ಸೌಂದರ್ಯ ಬಂದಿದೆ. ಶಬ್ದ ಪ್ರಪಂಚದಲ್ಲಿ ಸಾಹಿತ್ಯ ಮತ್ತು ವಿಮರ್ಶೆಗಳು ಇದೇ ಬಗೆಯ ಅನೋನ್ಯ ಸಂಬಂಧವನ್ನು ಹೊಂದಿರುತ್ತವೆ. ಈ ಸಂಬಂಧವು ಸಾರ್ಥಕವೂ ಫಲಪ್ರದವೂ ಆಗಬೇಕಾದರೆ ಸಾಹಿತ್ಯಿಕರು ಮತ್ತು ವಿಮರ್ಶಕರು ಇದನ್ನು ಚೆನ್ನಾಗಿ ಅರಿತಿರಬೇಕು, ಅರಿತಂತೆ ಇರುವವರಾಗಬೇಕು. ತಂತಮ್ಮ ಸ್ಥಾನದಲ್ಲಿ ಮತ್ತು ಕಾರ್ಯದಲ್ಲಿ ಅವರು ಪರಿಣತರಾಗಬೇಕಲ್ಲದೆ ತಮ್ಮ ನಡುವಿನ ಸಂಬಂಧವನ್ನು ಬೆಳೆಸುವುದರಲ್ಲಿಯೂ ಅವರು ನಿರತರಾಗಬೇಕು. 'ನಿನ್ನದು ನನಗೇನು ಸಂಬಂಧ?' ಎಂಬ ಉದಾಸೀನಭಾವವಾಗಲಿ ತಿರಸ್ಕಾರ ಭಾವವಾಗಲಿ ಇಬ್ಬರಿಗೂ ಸಲ್ಲದು. ಅಥವಾ ಬಾಯ್ತುಂಬ ಹೊಗಳುವ ಮಟ್ಟಿಗೆ ವಿಮರ್ಶಕ ಬೇಕೆಂದು ಸಾಹಿತ್ಯಿಕನೂ ಕೆಡೆ ನುಡಿದು ಕುಚೇಷ್ಟೆ ಮಾಡುವುದಕ್ಕೆ ಸಾಹಿತ್ಯಿಕ ಬೇಕೆಂದು ವಿಮರ್ಶಕನೂ ಅನ್ಯೋನ್ಯ ಸಂಬಂಧವನ್ನು ಇಟ್ಟುಕೊಳ್ಳುವುದಾದರೆ ಸಾಹಿತ್ಯಸಂಸಾರದಲ್ಲಿ ಅದಕ್ಕಿಂತ ವಿರಸದಾಂಪತ್ಯ ಬೇರೊಂದಿಲ್ಲ ಎನ್ನಬೇಕಾದೀತು. ಸರಸ ದಾಂಪತ್ಯದಲ್ಲಿ ವ್ಯಕ್ತಿತ್ವಕ್ಕೆ ಬಾಧೆತಾರದೆ, ಅದರ ವಿಕಾಸಕ್ಕೆ ನೆರವಾಗುವ ಸ್ನೇಹ, ಸಮರಸಭಾವ ಬೇಕು, ತಿಳಿವಳಿಕೆ, ಹೊಂದಿಕೆ, ಬೇಕು. ಸಾಹಿತ್ಯಕ-ವಿಮರ್ಶಕರಲ್ಲಿ ಇಂಥ 'ಸರಸದಾಂಪತ್ಯ' ಬೆಳೆದಂತೆ ಸಾಹಿತ್ಯ ಬೆಳೆಯುತ್ತದೆ, ಕಳೆ ಪಡೆಯುತ್ತದೆ. ಸಾಹಿತ್ಯ ಸರಿಯಾಗಿ ಬೆಳೆದಂತೆ ಸಂಸ್ಕೃತಿ ಬೆಳೆಯುತ್ತದೆ.

ಸಾಹಿತ್ಯಿಕನ ಅಥವಾ ಕವಿಯ ಲಕ್ಷಣವೇನು, ವಿಮರ್ಶಕನ ಅಥವಾ ರಸಿಕನ ಲಕ್ಷಣವೇನೆಂಬುದನ್ನು ಸಾವಿರಾರು ವರ್ಷದಿಂದ ಬಲ್ಲವರು ಚರ್ಚಿಸುತ್ತ ಬಂದಿದ್ದಾರೆ. ಈ ವಿಷಯದಲ್ಲಿ ಹೊಸದಾಗಿ ಹೇಳಬೇಕಾದ್ದಿದೆ ಎಂದಲ್ಲ, ಹೊಸ ಮಾತಿನಲ್ಲಿ ಹೇಳಬಹುದು; ಆ ಎತ್ತರಕ್ಕೆ ಏರಲು ಇಂದಿನ ಜನಕ್ಕೆ ಹೊಸ ಪ್ರೇರಣೆಯನ್ನು ಒದಗಿಸಬಹುದು. ಸಾಹಿತ್ಯ ನಿರ್ಮಿತಿ ಮತ್ತು ಸಮೀಕ್ಷೆಗೆ ಸಮಾನವಾದ ರಸಪ್ರಜ್ಞೆ ಇರುವುದೆಂದು ಆಗಲೆ ಹೇಳಿದೆ. ಸಾಹಿತ್ಯಿಕರ ಮತ್ತು ವಿಮರ್ಶಕರ ಮನೋಭೂಮಿಯಲ್ಲಿ ಆ ಪ್ರಜ್ಞೆ ಇರುವುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. 'ಸರಸ್ವತ್ಯಾ: ತತ್ವಂಕವಿ ಸಹೃದಯಾಖ್ಯಂ ವಿಜಯತೇ' ಎಂದು ಅಭಿನವ ಗುಪ್ತನು ಹೇಳಿದ್ದರಲ್ಲಿ ಇದೇ ತಾತ್ಪರ್ಯವು ಹೊರಪಡುತ್ತದೆ. ಕವಿ-ಸಹೃದಯರಿಬ್ಬರೂ ಸರಸ್ವತಿಯ ಒಂದೇ ತತ್ವಕ್ಕೆ ಕೊಟ್ಟ ಎರಡು ಹೆಸರು ಮಾತ್ರ. ಸಾರಸ್ವತ ಪುತ್ರರು ಕವಿಗಳೂ ಆಗಿರುತ್ತಾರೆ, ಸಹೃದಯರೂ ಆಗಿರುತ್ತಾರೆ. ಮೂಲಪ್ರಜ್ಞೆಯ ದೃಷ್ಟಿಯಿಂದ ಈ ಮಾತು ನಿಜವಾದರೂ ಪ್ರತ್ಯಕ್ಷಕೃತಿಯಲ್ಲಿ ಹಾಗೂ ಅದನ್ನು ಹೊರಪಡಿಸುವ ಪ್ರಕ್ರಿಯೆಯಲ್ಲಿ ಕವಿಗಳು ಕವಿಗಳೇ ಆಗುತ್ತಾರೆ, ಸಹೃದಯರು ಸಹೃದಯರೇ ಆಗುತ್ತಾರೆ. ಅವರಿಬ್ಬರೂ ಬೇರೆ ವ್ಯಕ್ತಿಗಳೇ ಆಗಿರಬೇಕಾಗಿಲ್ಲ, ಆದರೆ ಅವರಿಬ್ಬರ ಅಭಿವ್ಯಕ್ತಿ ಆಯಾ ಸ್ಥಾನದಲ್ಲಿ ಬೇರೆ ಬೇರೆಯಾಗಿರುತ್ತದೆ. ಸ್ಥಾನದಲ್ಲಿ ಗೊಂದಲವುಂಟಾದರೆ ಕಾರ್ಯದಲ್ಲಿಯೂ ಗೊಂದಲವೇಳಬಹುದು. ಆದರೆ ಗೊಂದಲವನ್ನು ತಪ್ಪಿಸಲೆಂದು ಇಬ್ಬರ ನಡುವೆ ಗೋಡೆ ಕಟ್ಟುವುದು ವಿಹಿತವಲ್ಲ. ಕವಿಗಳು ವಿಮರ್ಶಕರಾಗಿರಲಿ, ವಿಮರ್ಶಕರು ಕವಿಗಳಾಗಿರಲಿ, ಆಯಾ ಸ್ಥಾನದ ಔಚಿತ್ಯವನ್ನು ಅರಿತಿರಬೇಕು ಮಾತ್ರ. 'ಕವಿಗಳೇ ಕವಿಗಳ ಬೆಲೆ ಕಟ್ಟಬಲ್ಲರು' ಎಂಬ ಅಭಿಪ್ರಾಯವೊಂದಿದೆ. 'To judge of poets is only the faculty of poets' ಎಂಬ ಹಳೆಯ ಮಾತನ್ನು ಹೊಸ ಕಾಲದ ವಿಮರ್ಶಕರು ಎತ್ತಿ ಹಿಡಿದಿದ್ದಾರೆ, ಆದಕ್ಕೆ ಕಾರಣ ಕೊಟ್ಟಿದ್ದಾರೆ. 'ಸೊಗಯಿಸುವ ಕಬ್ಬಮಂ ಕಬ್ಬಿಗರಲ್ಲದೆ ಮೆಚ್ಚರ್ ಉಳ್ದರೇನ್ ಅಳ್ವರೆ?' ಎಂದು ಆಂಡಯ್ಯನೂ ಹೇಳಿದ್ದಾನೆ. ಆದರೆ 'ಕವಿಗಳಲ್ಲದವರೇ ಕವಿಗಳ ಬೆಲೆ ಕಟ್ಟಬಲ್ಲರು' ಎಂಬುದನ್ನೂ ಹೇಳುವವರಿದ್ದಾರೆ. ಯಾಕೆಂದರೆ ಅವರು ಅಲಿಪ್ತರಾಗಿ ಭಾವನಾವಶವಾಗದೆ ನೋಡಬಹುದು. ಸಮೀಕ್ಷೆಯ ಶಾಸ್ತ್ರ ಮತ್ತು ಕಲೆಯಲ್ಲಿ ನುರಿತ ಸಹೃದಯರು ಕವಿಗಳಾಗಿರಲಿ ಬಿಡಲಿ, ಕಾವ್ಯವನ್ನು ಮೆಚ್ಚಬಲ್ಲರು, ಕವಿಗಳ ಬೆಲೆ ಕಟ್ಟಬಲ್ಲರು. ಕವಿಗಳೇ ಈ ಕೆಲಸಕ್ಕೆ ತಕ್ಕವರು ಎಂಬುದನ್ನು ಶಬ್ದಶ: ತಿಳಿದುಕೊಂಡರೆ ಅದು ಅತಿಶಯೋಕ್ತಿಯೇ ಸರಿ. ಅದರ ಇನ್ನೊಂದು ತುದಿಯ ಮಾತೂ ಇನ್ನೊಂದು ಬಗೆಯ ಅತಿಶಯೋಕ್ತಿ. ಕಾವ್ಯರಚನೆಯ ಸ್ವಾನುಭವವುಳ್ಳ ಕವಿಗಳು ಇತರ ಕವಿಕೃತಿಗಳ ಜೀವಾಳವನ್ನರಿತು ಮೆಚ್ಚಬಲ್ಲವರಾಗುತ್ತಾರೆ. ಸ್ವಾನುಭವದ ಮೂಲಕ ಅವರ ಅರ್ಹತೆ ಹೆಚ್ಚುತ್ತದೆ ಎಂಬುದೇ ಮೊದಲನೆಯ ಅಭಿಪ್ರಾಯದಲ್ಲಿ ಗ್ರಾಹ್ಯವಾದ ಅಂಶವೆಂದು ತಿಳಿಯಬೇಕು.

Adda247 GET IT ON Google Play

ಆದರೆ ಸಹೃದಯತೆಯಲ್ಲಿ ಪರಿಣತಿ ಹೊಂದದೆ ಬರೀ ಕವಿಗಳಾದ ಮಾತ್ರಕ್ಕೆ ಅವರು ವಿಮರ್ಶೆ ಮಾಡಬಲ್ಲರೆಂದು ತಿಳಿಯಲಾಗದು. ಇನ್ನೊಂದು ಅಭಿಪ್ರಾಯವು ಸೂಚಿಸುವಂತೆ ಎಲ್ಲ ಕವಿಗಳು ತಮ್ಮ ಅಥವಾ ಇತರರ ಕೃತಿಗಳನ್ನು ಆಲಿಪ್ತರಾಗಿ ನೋಡುವರೆಂಬ ಭರವಸೆಯಿಲ್ಲ. ಅಲ್ಲದೆ ಸ್ವನಿಷ್ಠವಾದ ವ್ಯಕ್ತಿತ್ವದ ಮೂಲಕ ಕೆಲವು ಕವಿಗಳು ತಮ್ಮ ಕೃತಿಗಳಿಗೆ ಸರಿಹೋಗುವ ಪ್ರಮಾಣಗಳಿಂದ ಎಲ್ಲರ ಕೃತಿಗಳನ್ನು ಅಳೆಯುವ ಪ್ರಯತ್ನ ಮಾಡಬಹುದು. ಇಂಥ ಸಂದರ್ಭದಲ್ಲಿ ಕವಿಗಳಲ್ಲದವರಿಗೆ ಹೆಚ್ಚಿನ ಅರ್ಹತೆ ಬರುತ್ತದೆ. ಆದರೆ ಕವಿಗಳಾದ ಮಾತ್ರಕ್ಕೆ ಹೇಗೆ ವಿಮರ್ಶೆಯ ಯೋಗ್ಯತೆ ಬರುವುದಿಲ್ಲವೋ ಹಾಗೆಯೇ ಕವಿಗಳಲ್ಲದವರಾದ ಮಾತ್ರಕ್ಕೆ ಯಾರಿಗೂ ವಿಮರ್ಶೆಯ ಶಕ್ತಿ ಬರಲಾರದು.

**31.** ಈ ಲೇಖನ ಭಾಗದಲ್ಲಿ ಲೇಖಕರ ಪ್ರಧಾನ ಆಶಯ :

(A) ಕವಿ-ವಿಮರ್ಶಕರ ಸಂಬಂಧದ ಪರಾಮರ್ಶೆ

(B) ವಿಮರ್ಶಕ ಓದುಗರ ಸಂಬಂಧದ ಪರಾಮರ್ಶೆ

(C) ಕವಿ-ಓದುಗರ ಸಂಬಂಧದ ಪರಾಮರ್ಶೆ

(D) ವಿಮರ್ಶಕ-ಸಮಾಜದ ಸಂಬಂಧದ ಪರಾಮರ್ಶೆ

**32.** ಸಾಹಿತ್ಯ ಮತ್ತು ವಿಮರ್ಶೆಗಳ ಪೂರಕ ಬೆಳವಣಿಗೆಗೆ :

(A) ಕವಿಯು ವಿಮರ್ಶಕರ ಬಗ್ಗೆ ಉದಾಸೀನ ಭಾವನೆಯನ್ನು ಹೊಂದಿರಬೇಕು

(B) ಕವಿ ಮತ್ತು ವಿಮರ್ಶಕರಲ್ಲಿ ಸೌಹಾರ್ದ-ಸೌಜನ್ಯ ಪೂರ್ಣವಾದ ಸಂಬಂಧ ಅಗತ್ಯ

(C) ವಿಮರ್ಶಕರು ಕವಿಗಳ ಬಗ್ಗೆ ತಿರಸ್ಕಾರ ಭಾವನೆಯನ್ನು ಹೊಂದಬೇಕು

(D) ಕವಿ ಹಾಗೂ ವಿಮರ್ಶಕರಲ್ಲಿ ಪರಸ್ಪರ ಸೌಹಾರ್ದ ಸಂಬಂಧ ಅನಗತ್ಯ

**33.** ಕವಿಗಳ ಮತ್ತು ವಿಮರ್ಶಕರ ನಡುವೆ ಗೋಡೆ ಕಟ್ಟುವುದೆಂದರೆ :

(A) ಕವಿಗಳು ಬೇರೆ, ವಿಮರ್ಶಕರು ಬೇರೆ ಎಂದು ತಿಳಿಯುವುದು

(B) ಕವಿಗಳು, ಶ್ರೇಷ್ಠರು, ವಿಮರ್ಶಕರು ಕನಿಷ್ಠರು ಎಂದು ಒಪ್ಪುವುದು

(C) ವಿಮರ್ಶಕರು ಶ್ರೇಷ್ಠರು, ಕವಿಗಳು ಕನಿಷ್ಠರು ಎಂದು ತಿಳಿಯುವುದು

(D) ಕವಿಗಳು ಮತ್ತು ವಿಮರ್ಶಕರು ಮಾತ್ರ ಶ್ರೇಷ್ಠರೆಂದು ತಿಳಿಯುವುದು

**34.** ಆಂಡಯ್ಯನ ಅಭಿಪ್ರಯದಲ್ಲಿ ಯಾರು ನಿಜವಾದ ವಿಮರ್ಶಕರು ?

(i) ಸಹೃದಯನೇ ನಿಜವಾದ ವಿಮರ್ಶಕ

(ii) ಕವಿಯಾಗಿರುವವನ ಮಾತ್ರ ನಿಜವಾದ ವಿಮರ್ಶಕನಾಗಬಲ್ಲ

(iii) ವಿಮರ್ಶಕರು ಕವಿಯಾಗಿರಲೇಬೇಕು

(iv) ಕಾವ್ಯರಚನೆಯನ್ನು ಅರಿಯದವನು ನಿಜವಾದ ವಿಮರ್ಶಕ

ಇವುಗಳಲ್ಲಿ ಸರಿವಾದ ಉತ್ತರ :

(A) (i) ಮತ್ತು (ii)    (B) (ii) ಮತ್ತು (iii)

(C) (iii) ಮತ್ತು (iv)    (D) (i) ಮತ್ತು (iv)

Adda247 GET IT ON Google Play

**35.** ಕವಿಯೇ ವಿಮರ್ಶಕನಾದಾಗ ಕೆಲವೊಮ್ಮೆ ಇರುವ ತೊಡಕು :

(i) ಕವಿಯು ಇತರರ ಕೃತಿಗಳನ್ನು ಆಲಿಪ್ತನಾಗಿ ನೋಡಲಾರನು

(ii) ಕವಿಯು ಸಹೃದಯನಾಗಲಾರ

(iii) ಕವಿಯು ಇತರರ ಕೃತಿಗಳನ್ನು ತಿರಸ್ಕಾರಭಾವದಿಂದ ನೋಡುವುದು

(iv) ಕವಿಗಳು ತಮ್ಮ ಕೃತಿಗಳಿಗೆ ಸರಿಹೊಂದುವ ಮಾನದಂಡದಿಂದ ಇತರರ ಕೃತಿಗಳ ಮಾಪನ ಮಾಡುವುದು

ಇವುಗಳಲ್ಲಿ ಸರಿವಾದ ಉತ್ತರ :

(A) (ii) ಮತ್ತು (iii) (B) (i) ಮತ್ತು (ii)

(C) (ii) ಮತ್ತು (iv) (D) (i) ಮತ್ತು (iv)

***<u>ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆ ಮಾದರಿ</u>***

**36.** **ಹೇಳಿಕೆ :** 'ಈಸಬೇಕು ಇದ್ದು ಜಯಿಸಬೇಕು'

**ವಿವರಣೆ :** ನೀರಿನಲ್ಲಿ ಈಜಾಡಿದವನೇ ಬದುಕಿನಲ್ಲಿ ಜಯ ಗಳಿಸುತ್ತಾನೆ

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ಸರಿ, ವಿವರಣೆಯೂ ಸರಿ (B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ (D) ಹೇಳಿಕೆ ತಪ್ಪು, ವಿವರಣೆಯೂ ತಪ್ಪು

**37.** **ಹೇಳಿಕೆ :** 'ಓಲಗಿಸಿ ಬಾಳ್ವುದೆ ಕಷ್ಟ ಮಿಳಾದಿನಾಥರಂ'

**ವಿವರಣೆ :** ಮಹಾರಾಜರ ಮನಸ್ಸನ್ನು ಒಲಿಸಿಕೊಂಡು ಜೀವಿಸುವುದು ಸುಲಭ

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ಸರಿ, ವಿವರಣೆಯೂ ಸರಿ (B) ಹೇಳಿಕೆ ತಪ್ಪು, ವಿವರಣೆಯೂ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ (D) ಹೇಳಿಕೆ ಸರಿ, ವಿವರಣೆ ತಪ್ಪು

**38.** **ಹೇಳಿಕೆ :** ಸೆಗಣಿಯ ಬೆನಕಂಗೆ ಸಂಪಗೆ ಅರಳಲ್ಲಿ ಪೂಜಿಸಿದರೆ ಅದರ ಗಂಜಲ ಬಿಡದಣ್ಣ

**ವಿವರಣೆ :** ಸೆಗಣಿಯ ವಿನಾಯಕನಿಗೆ ಚಂಪಕದ ಹೂವಿನಲ್ಲಿ ಅರ್ಚನೆಯನ್ನು ಮಾಡಿದರೆ ಆಹ್ಲಾದಕಾರಿ ಸೌರಭ ಉಂಟಾಗುವುದಿಲ್ಲ

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ಸರಿ, ವಿವರಣೆ ತಪ್ಪು (B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ (D) ಹೇಳಿಕೆ ತಪ್ಪು, ವಿವರಣೆ ತಪ್ಪು

Adda247 GET IT ON Google Play

39. **ಹೇಳಿಕೆ :** 'ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ'

**ವಿವರಣೆ :** ಕನ್ನಡ ನಾಡುನುಡಿಯ ಸೇವೆ ಮಾಡಲು ಕಂಕಣ ಬದ್ಧರಾದವರನ್ನು ಕಲ್ಪವೃಕ್ಷ ಕೈ ಬಿಡುವುದಿಲ್ಲ.

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ಸರಿ, ವಿವರಣೆಯೂ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ತಪ್ಪು

40. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾದ ಹೊಂದಿಕೆಯಾಗುತ್ತದೆ :

(A) ಪೂರ್ಣಚಂದ್ರ ತೇಜಸ್ವಿ - ಕರ್ವಾಲೊ

(B) ಎನ್.ಎಂ-ಚೆನ್ನಯ್ಯ - ನವಿಲುನೌಕೆ

(C) ಗೀತಾನಾಗಭೂಷಣ - ತೇರು

(D) ಬರಗೂರು ರಾಮಚಂದ್ರಪ್ಪ - ನಿಕ್ಷೇಪ

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾದ ಹೊಂದಿಕೆಯಾಗುತ್ತದೆ ?

(A) ಮಾರ್ಗ - ಗಿರಡ್ಡಿ ಗೋವಿಂದರಾಜ

(B) ಕದಳಿಯ ಕರ್ಪೂರ - ತೀಪ್ಪೇರುದ್ರಸ್ವಾಮಿ

(C) ಗರಿ - ಚೆನ್ನವೀರಕಣವಿ

(D) ಟೊಳ್ಳು-ಗಟ್ಟಿ - ಚಂದ್ರಕಾಂತ ಕುಸನೂರ

Adda247

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆ ಯಾಗುತ್ತದೆ ?

(A) ಯೋಗವಾಹ - ಮೂರು

(B) ಅನುನಾಸಿಕ - ಆರು

(C) ವರ್ಗೀಯ ವ್ಯಂಜನ - ಇಪ್ಪತ್ತೈದು

(D) ಅವರ್ಗೀಯ ವ್ಯಂಜನ - ಐವತ್ತು

43. ಇವುಗಳಲ್ಲಿ ಯಾವ ಜೋಡಿ ಸರಿ ಹೊಂದುವುದಿಲ್ಲ ?

(A) ಕೇಶಿರಾಜ - ಭಾಷಾಭೂಷಣ

(B) ನಾಗವರ್ಮ - ಛಂದೋಂಬುಧಿ

(C) ಭಟ್ಟಾಕಳಂಕ - ಶಬ್ದಾನುಶಾಸನ

(D) ತೀನಂಶ್ರೀ - ಕನ್ನಡ ಮಧ್ಯಮ ವ್ಯಾಕರಣ

Adda247 GET IT ON Google Play

**44.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆ ಯಾಗುತ್ತದೆ ?

(A) ನಾನು - ಪ್ರಥಮ ಪುರುಷ ಸರ್ವನಾಮ

(B) ಅವನು - ಮಧ್ಯಮ ಪುರುಷ ಸರ್ವನಾಮ

(C) ನೀನು - ಉತ್ತಮ ಪುರುಷ ಸರ್ವನಾಮ

(D) ತಾವು - ಆತ್ಮಾರ್ಥಕ ಸರ್ವನಾಮ

***ಬಹು ಆಯ್ಕೆಯ ಜೋಡಣೆ***

**45.**

| | | | |
|---|---|---|---|
| (a) | ಕವಿರಾಜಮಾರ್ಗ | (i) | ಕನ್ನಡ ಭಾಗವತ |
| (b) | ಚಾಟುವಿಠಲನಾಥ | (ii) | ದೇಷರಾಜ |
| (c) | ರಾಜಾವಳಿ ಕಥೆ | (iii) | ನಂಜುಂಡ |
| (d) | ಸೊಬಗಿನ ಸೋನೆ | (iv) | ಶ್ರೀವಿಜಯ |
| | | (v) | ದೇವಚಂದ್ರ |

ಇವುಗಳಲ್ಲಿ ಸರಿಯಾದ ಉತ್ತರ :

| | *(a)* | *(b)* | *(c)* | *(d)* |
|---|---|---|---|---|
| (A) | (i) | (iii) | (v) | (iv) |
| (B) | (ii) | (v) | (iv) | (iii) |
| (C) | (iv) | (i) | (v) | (ii) |
| (D) | (v) | (ii) | (i) | (iii) |

**46.**

| | | | |
|---|---|---|---|
| (a) | ಶಿವರುದ್ರಪ್ಪ | (i) | ಮೊದಲು ಮಾನವನಾಗು |
| (b) | ಡಿ. ವಿ. ಜಿ | (ii) | ದ್ರಾಕ್ಷಿ - ದಾಳಿಂಬೆ |
| (c) | ಸಿದ್ದಯ್ಯಪುರಾಣಿಕ | (iii) | ಅಂತ:ಪುರ ಗೀತೆಗಳು |
| (d) | ಕಡೆಂಗೋಡ್ಲು ಶಂಕರಭಟ್ಟ | (iv) | ಸಾಮಗಾನ |
| | | (v) | ಪತ್ರಪುಷ್ಪ |

ಇವುಗಳಲ್ಲಿ ಸರಿಯಾದ ಉತ್ತರ :

| | *(a)* | *(b)* | *(c)* | *(d)* |
|---|---|---|---|---|
| (A) | (iv) | (ii) | (iii) | (i) |
| (B) | (iv) | (iii) | (i) | (v) |
| (C) | (i) | (iii) | (v) | (iv) |
| (D) | (ii) | (i) | (v) | (iii) |

Adda247 GET IT ON Google Play

**47.** (a) ಮಹಾಛಂದಸ್ಸು (i) ಶ್ರೀವಿಜಯ

(b) ದಕ್ಷಿಣೋತ್ತರಮಾರ್ಗಗಳು (ii) ಕೇಶಿರಾಜ

(c) ನವವಿಧಲಿಂಗಗಳು (iii) ಭರತ

(d) ರಸಸೂತ್ರ (iv) ಮಮ್ಮಟ

(v) ಕುವೆಂಪು

ಇವುಗಳಲ್ಲಿ ಸರಿಯಾದ ಉತ್ತರ :

| | *(a)* | *(b)* | *(c)* | *(d)* |
|---|---|---|---|---|
| (A) | (iv) | (iii) | (ii) | (v) |
| (B) | (ii) | (v) | (iv) | (i) |
| (C) | (iii) | (ii) | (v) | (iv) |
| (D) | (v) | (i) | (ii) | (iii) |

***ಅನುಕ್ರಮ ಮಾದರಿ***

ಈ ಕೆಳಗಿನ ಕಾಲಾನುಕ್ರಮ ಸರಣಿಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ

**48.** (A) ಕರ್ನಾಟಕ ಕವಿಚರಿತೆ, ಮರಳಿ ಮಣ್ಣಿಗೆ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮಹಾಚೈತ್ರ

(B) ಮರಳಿ ಮಣ್ಣಿಗೆ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮಹಾಚೈತ್ರ, ಕರ್ನಾಟಕ ಕವಿಚರಿತೆ

(C) ಕರ್ನಾಟಕ ಕವಿಚರಿತೆ, ಮಹಾಚೈತ್ರ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮರಳಿ ಮಣ್ಣಿಗೆ

(D) ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಕವಿಚರಿತೆ, ಮರಳಿ ಮಣ್ಣಿಗೆ, ಮಹಾಚೈತ್ರ

**49.** (A) ಅಕ್ಕಮಹಾದೇವಿ, ದುರ್ಗಸಿಂಹ, ಕೆಂಪುನಾರಾಯಣ, ಕನಕದಾಸ

(B) ಕನಕದಾಸ, ಅಕ್ಕಮಹಾದೇವಿ, ಕೆಂಪುನಾರಾಯಣ, ದುರ್ಗಸಿಂಹ

(C) ದುರ್ಗಸಿಂಹ, ಅಕ್ಕಮಹಾದೇವಿ, ಕನಕದಾಸ, ಕೆಂಪುನಾರಾಯಣ

(D) ಕೆಂಪುನಾರಾಯಣ, ಕನಕದಾಸ, ದುರ್ಗಸಿಂಹ, ಅಕ್ಕಮಹಾದೇವಿ

Adda247
GET IT ON Google Play

**50.** (A) ಮಾಳವಾಡ ಸ. ಸ., ರಾಜರತ್ನಂ, ಡಿ. ಆರ್. ನಾಗರಾಜ, ಯು. ಆರ್. ಅನಂತಮೂರ್ತಿ

(B) ರಾಜರತ್ನಂ, ಮಾಳವಾಡ ಸ. ಸ., ಯು. ಆರ್. ಅನಂತಮೂರ್ತಿ, ಡಿ. ಆರ್. ನಾಗರಾಜ

(C) ಯು. ಆರ್. ಅನಂತಮೂರ್ತಿ, ರಾಜರತ್ನಂ, ಮಾಳವಾಡ ಸ. ಸ., ಡಿ. ಆರ್. ನಾಗರಾಜ

(D) ಡಿ. ಆರ್. ನಾಗರಾಜ, ರಾಜರತ್ನಂ, ಮಾಳವಾಡ ಸ. ಸ., ಯು. ಆರ್. ಅನಂತಮೂರ್ತಿ

- o 0 o -

Adda247

Space For Rough Work